† ಶ್ರೀ ಎಚ್. ವಿ. ಕೌಜಲಗಿ.—ಈ ಪ್ರಶ್ನೆಗೆ ಸಂಬಂಧಿಸಿದವರೆಲ್ಲರೂ ನರ್ವಿಸಿನಲ್ಲಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಬೆಂಗಳೂರು ಡಿವಿಜನಲ್ ಕಮಿಷನರ ಆಫೀಸಿನಲ್ಲಿ ಭರ್ತಿ ಆಗದೇ ಇರುವ ಮುದ್ರಾಲೇಖಕರುಗಳ ವೇಕೆನ್ಸಿಗಳು ಎಷ್ಟು ಇದೆ ?

ಶ್ರೀ ಎಚ್. ವಿ. ಕೌಜಲಗಿ.—ವೇಕೆನ್ಸಿ ಇಲ್ಲ.

Retention and Posting of Teachers in their own taluks or villages

48. Sri K. P. NADAGAUDA (Mudhol).—

Will the Minister for Education be pleased to state :—

(*a*) whether it is the policy of the Government not to retain or post Primary School Teachers in their own Taluks ;

(*b*) the number of teachers who are working in their native villages and other villages in Mudhol, Jamkhandi and Bagalkot Taluk in Bijapur District and the duration of their stay in the same village ;

(*c*) the number of such teachers who are transferred to other taluks during the current year ; and the reason for not transferring the remaining such teachers immediately ?

Sri K. V. SHANKARA GOWDA (Minister for Education).—

(*a*) Yes, as far as possible.

(*b*)

	Number working in their own villages.	*Number working in other villages in the same taluk.*
Mudhol	84	98
Jamkhandi	146	133
Bagalkot	254	199

The duration of stay varies widely, but the average works out to about 4 years and nine months.

(*c*)

		Number of Teachers transferred.
1	Jamkhandi	27
2	Bagalkot	25
3	Mudhol	10

The transport of the remaining teachers will be done on a phased programme.

ಶ್ರೀ ಕೆ. ಪಿ. ನಾಡಗೌಡ.—ನ್ಯಾಯವು ನಾನು ನನ್ನ ಪ್ರಶ್ನೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಮುಧೋಳ, ಜಮಖಂಡಿ, ಬಾಗಲಕೋಟೆ ತಾಲ್ಲೂಕಿನಲ್ಲಿ ಎಷ್ಟು ಮಂದಿ ಉಪಾಧ್ಯಾಯರು

ಅವರವರ ಸ್ವಂತ ಗ್ರಾಮಗಳಲ್ಲಿ ಮತ್ತು ಇತರೆ ಗ್ರಾಮಗಳಲ್ಲಿ ಎಷ್ಟು ವರ್ಷಗಳಿಂದ ಇದ್ದಾರೆ ಎಂದು ಕೇಳಿದ್ದಕ್ಕೆ 20 ವರ್ಷಗಳಿಂದಲೂ ಒಂದೇ ಊರಿನಲ್ಲಿರತಕ್ಕವರು ಮತ್ತು ಇತರರು ಎಲ್ಲರನ್ನೂ ಸೇರಿಸಿ ಸರಾಸರಿ ಮಾಡಿ ಒಂದೇ ಕಡೆ ಕೆಲಸ ಮಾಡುವ ಉಪಾಧ್ಯಾಯರ ಅವಧಿಯು ಸರಾಸರಿ 4 ವರ್ಷ 9 ತಿಂಗಳಾಗುತ್ತದೆ ಎಂದು ಹೇಳಿದ್ದೀರಿ. ಇದು ಸರಿಯಿಲ್ಲ, ನಾನು ಮೇಲೆ ಹೇಳಿದ ಪ್ರದೇಶಗಳಲ್ಲಿ ದೊಡ್ಡ ದೊಡ್ಡವಕ್ಕಲಿಗರ ಮಕ್ಕಳು ಜಮೀನ್ದಾರರ ಮಕ್ಕಳು ಶಿಕ್ಷಕರಾಗಿ ತಮ್ಮ ತಮ್ಮ ಊರುಗಳಲ್ಲೇ ಬಹಳ ವರ್ಷಗಳಿಂದ ಇದ್ದುಕೊಂಡು ಶಾಲೆಗಳಿಗೆ ಸರಿಯಾಗಿ ಹೋಗದೆ ತಮ್ಮ ತಮ್ಮ ವಕ್ಕಲುತನವನ್ನು ಸುಧಾರಣೆ ಮಾಡಿಕೊಳ್ಳುತ್ತಿದ್ದಾರೆ, ಅದ್ದರಿಂದ ಅಂಥವರನ್ನು ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗಾ ಮಾಡುವುದಕ್ಕೆ ಸರ್ಕಾರದವರಿಗೆ ಇಚ್ಛೆ ಇದೆಯೇ ? ಮತ್ತು ಅಂಥವರನ್ನು ಎಂದರೆ 5 ವರ್ಷಗಳಿಗೆ ಮೇಲ್ಪಟ್ಟು ಒಂದೇ ಕಡೆ ಕೆಲಸ ಮಾಡತಕ್ಕವರನ್ನು ಹಾಗೂ ತಮ್ಮ ತಮ್ಮ ಸ್ವಂತ ಊರುಗಳಲ್ಲಿರತಕ್ಕ ಶಾಲೆಗಳಲ್ಲಿ ಕೆಲಸ ಮಾಡತಕ್ಕವರನ್ನೂ ಒಂದು ತಿಂಗಳಲ್ಲಿ ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೇ ?

†ಶ್ರೀ ಕೆ. ಎ. ಶಂಕರಗೌಡ.—ಅಯಾಯ ತಾಲ್ಲೂಕಿನ ಉಪಾಧ್ಯಾಯರುಗಳನ್ನು ಹೊರಗಡೆ ಬೇರೆ ಬೇರೆ ತಾಲ್ಲೂಕುಗಳಿಗೆ ಹಾಕಬೇಕೆಂಬ ಉದ್ದೇಶ ಸರ್ಕಾರಕ್ಕೆ ಮೊದಲಿನಿಂದಲೂ ಇದೆ. ಆದರೆ ಈಗ ಏನಾಗಿದೆ ಎಂದರೆ ಅನೇಕ ಕಡೆಗಳಲ್ಲಿ ಉಪಾಧ್ಯಾಯರುಗಳಿಗೆ ವಸತಿ ಸೌಕರ್ಯ ಇರುವುದಿಲ್ಲ, ಆದ್ದರಿಂದಎಲ್ಲರನ್ನೂ ಒಂದೇ ಸಾರಿ ಎನ್ ಮಾಸ್ ಆಗಿ ವರ್ಗಾ ಮಾಡುವುದಕ್ಕೆ ಬರುವುದಿಲ್ಲ ಎಂದು ಸರ್ಕಾರದ ಆರ್ಡರನ್ನು ತಾತ್ಕಾಲಿಕವಾಗಿ ತಡೆ ಹಿಡಿದಿದೆ. ಇದರಲ್ಲಿ ಸರ್ಕಾರದ ಇಚ್ಛೆ ಏನೆಂದರೆ ಸಾಧ್ಯವಾದ ಮಟ್ಟಿಗೆ 5 ವರ್ಷಗಳ ಒಂದು ಫೇಜ್ಡ್ ಪ್ರೋಗ್ರಾಮ್ ಹಾಕಿಕೊಂಡು ಆದರ ಪ್ರಕಾರ 5 ವರ್ಷಗಳಿಗೆ ಮೇಲ್ಪಟ್ಟು ಒಂದೇ ಶಾಲೆಯಲ್ಲಿರತಕ್ಕ ಉಪಾಧ್ಯಾಯಗಳನ್ನೂ ಮತ್ತು ಬಹಳ ದಿನಗಳಿಂದ ತಮ್ಮ ಸ್ವಂತ ಊರಿನಲ್ಲಿರತಕ್ಕ ಶಾಲೆಗಳಲ್ಲಿ ಉಪಾಧ್ಯಾಯರಾಗಿರತಕ್ಕವರನ್ನೂ ಬೇರೆ ಕಡೆ ವರ್ಗ ಮಾಡುತ್ತಿದ್ದೇವೆ, ಎಲ್ಲರನ್ನೂ ಒಂದೇ ಸಾರಿ ವರ್ಗ ಮಾಡುವುದಕ್ಕಾಗುವುದಿಲ್ಲ. ಏತಕೆಂದರೆ ಒಂದು ಲಕ್ಷ ಉಪಾಧ್ಯಾಯರು ಇದ್ದಾರೆ. ಅವರೆಲ್ಲರನ್ನು ಒಂದೇ ಸಾರಿ ವರ್ಗ ಮಾಡಿದರೆ ಕೋಟ್ಯಾಂತರ ರೂಪಾಯಿಗಳ ಟಿ. ಎ. ಡಿ. ಎ. ಕೊಡಬೇಕಾಗುತ್ತದೆ. ಆದ್ದರಿಂದ ಫೇಜ್ಡ್ ಪ್ರೋಗ್ರಾಮ್ ಪ್ರಕಾರ ತಮ್ಮ ತಮ್ಮ ಸ್ವಂತ ಊರುಗಳಲ್ಲಿರತಕ್ಕ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳನ್ನು ಬೇರೆ ಕಡೆ ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಅಂಥವರನ್ನು 15 ಪರ್ಸೆಂಟ್‌ವರೆಗೆ ವರ್ಗ ಮಾಡಿದ್ದೇವೆ. ಬಹಳ ವರ್ಷಗಳಿಂದ ಒಂದೇ ಕಡೆ ಇದ್ದುಕೊಂಡು ಟ್ರಾನ್ಸ್‌ಫರ್ ತಪ್ಪಿಸಿಕೊಂಡು ಯಾರಾದರೂ ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಕೆ. ಪಿ. ನಾಡಗೌಡ.—ಈಗಾಗಲೇ ಮುಧೋಳ್ ತಾಲ್ಲೂಕಿನಲ್ಲಿ 10 ಜನ ಉಪಾಧ್ಯಾಯರುಗಳನ್ನು ವರ್ಗ ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ. ಮತ್ತು ಹಂತ ಹಂತವಾಗಿ ವರ್ಗ ಮಾಡುತ್ತೇವೆ ಎಂದು ಹೇಳಿದ್ದೀರಿ, ಆದರೆ ಮಂತ್ರಿಗಳ ಮೇಲೆ ವರ್ಚಸ್ಸು ಬೀರುವವರನ್ನು ವರ್ಗ ಮಾಡುವುದಿಲ್ಲ. ದುರ್ಬಲರಾಗಿರುವವರನ್ನು, ಬಡವರನ್ನು, ಮಂತ್ರಿಗಳಮೇಲೆ ವರ್ಚಸ್ಸು ಬೀರುವುದಕ್ಕೆ ಸಾಧ್ಯವಿಲ್ಲದೇ ಇರುವವರನ್ನು ಮಾತ್ರ ಹೊರಗಡೆ ವರ್ಗ ಮಾಡುತ್ತೀರಿ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಆ ತಾಲ್ಲೂಕುಗಳಲ್ಲಿ ಸಂಚಾರ ಮಾಡಿ ಅಥವಾ ತಮಗೆ ವಿಶ್ವಾಸವಿರುವಂತಹ ಯಾರಾದರೂ ಆಫೀಸರನ್ನು ಅಲ್ಲಿಗೆ ಕಳುಹಿಸಿಕೊಟ್ಟು ಅಂಥಾ ಉಪಾಧ್ಯಾಯರನ್ನು ತಾಲ್ಲೂಕು ಮಟ್ಟದಲ್ಲಿ ಹಂತ ಹಂತವಾಗಿ ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಇದು ಬಹಳ ಒಳ್ಳೆಯ ಸಲಹೆ. ಅದೇ ರೀತಿ ಪ್ರಯತ್ನ ಮಾಡುತ್ತೇವೆ. ನಾವು ಯಾರ ವರ್ಚಸ್ಸಿಗೂ ಬಲಿಯಾಗುವುದಿಲ್ಲ. ಸಾಧಾರಣವಾಗಿ ಉಪಾಧ್ಯಾಯರು ಅವರವರ ಸ್ವಂತ ಊರುಗಳಲ್ಲೇ ಇದ್ದುಕೊಂಡು ಸ್ವಂತ ಕಾರ್ಯಗಳನ್ನು ಮಾಡಿಕೊಂಡು ಪಾಠ ಶಾಲೆಗಳ ಕೆಲಸವನ್ನು ಸರಿಯಾಗಿ ಮಾಡುವುದಿಲ್ಲ ಎನ್ನತಕ್ಕ ದೂರುಗಳು ಬಂದಾಗ ಸಂಬಂಧಪಟ್ಟ ಆಫೀಸರುಗಳಿಂದ ರಿಪೋರ್ಟ್ ತರಿಸಿಕೊಂಡು ಅಂಥಾ ಉಪಾಧ್ಯಾಯರುಗಳನ್ನು ಬೇರೆ ಕಡೆಗಳಿಗೆ ವರ್ಗ ಮಾಡಿದ್ದೇವೆ. ಮುಂದೆಯೂ ಅದೇ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.